ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 2560/2022
ಪಿ ಡಬ್ಲುಃ 5
ಸಿ ಡಬ್ಲುಃ 7

| | |
|---|---|
| ಸಾಕ್ಷಿದಾರರ ಹೆಸರು | ಶಿವರಾಮ ದೇಸಾಯಿ |
| ತಂದೆಯ ಹೆಸರು | ಶಂಕರ ದೇಸಾಯಿ |
| ವಯಸ್ಸು | 53 |
| ಉದ್ಯೋಗ | ಎ ಎಸ್ ಐ ಹೊನ್ನಾವರ ಠಾಣೆ |
| ವಾಸ್ತವ್ಯ | ಹೊನ್ನಾವರ |

ಸಾಕ್ಷಿಯನ್ನು ದಿನಾಂಕಃ 03.07.2024 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು ಕಳೆದ ನಾಲ್ಕು ವರ್ಷಗಳಿಂದ ಹೊನ್ನಾವರ ಪೋಲಿಸ್ ಠಾಣೆಯಲ್ಲಿ ಎ. ಎಸ್. ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 12.01.2022 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಆಗಮಿಸಿ ನೀಡಿದ ಗಣಕೀಕೃತ ದೂರು, ಪಂಚನಾಮೆ ಮತ್ತು ಆರೋಪಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಸ್ವೀಕರಿಸಿ ಠಾಣಾ ಗುನ್ನಾ ನಂಃ 14/22 ರಂತೆ ಪ್ರ.ವರದಿಯನ್ನು ದಾಖಲಿಸಿರುತ್ತೇನೆ. ದೂರನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 2 ಬಿ ಎಂದು, ಸಾಕ್ಷಿ ಪ್ರ.ವರದಿಯನ್ನು ಗುರುತಿಸಿದ್ದರಿಂದ ನಿ.ಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 3 ಎ ಎಂದು ಗುರುತಿಸಲಾಯಿತು. ನಂತರ ವಶಕ್ಕೆ ಪಡೆದ ಮುದ್ದೆಮಾಲಿನ ಕುರಿತು ಪಿ.ಎಫ್ ಮೂಲಕ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ 1 ಆರೋಪಿಗೆ ಕಲಂ 41 ಎ ಅಡಿ ನೋಟಿಸನ್ನು ನೀಡಿರುತ್ತೇನೆ. ನಂತರ ಚಾಸಾ 4 ರಿಂದ 6 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ 2 ನೇ ಆರೋಪಿಗೆ ಕಲಂ 41 ಎ ಅಡಿ ನೋಟಿಸನ್ನು ನೀಡಿರುತ್ತೇನೆ. ನಂತರ ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಆರ್.ಎಂ.ಬಿ. ವಕೀಲರಿಂದಃ**

ನಾನು ಗುನ್ಹಾ ಸ್ಥಳಕ್ಕೆ ಭೇಟಿ ಕೊಟ್ಟಿದ್ದು ಇರುವುದಿಲ್ಲ. ಚಾಸಾ 4 ರಿಂದ 6 ರವರು ನಮ್ಮ ಪೋಲಿಸ ಸಿಬ್ಬಂದಿಯವರು ಎಂದರೆ ಸರಿ. ಬೇರೆ ಪ್ರಕರಣಕ್ಕೆ ಸಂಬಂಧಿಸಿದ ಮುದ್ದೆಮಾಲನ್ನು ಉಪಯೋಗಿಸಿ ಈ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳ ಸಾರ್ವಜನಿಕ ಸ್ಥಳ ಎನ್ನುವ ಕುರಿತು ಯಾವುದೇ ದಾಖಲೆಗಳನ್ನು ಪಡೆದಿರುವುದಿಲ್ಲ. ಆ ರೀತಿ ದಾಖಲೆ ಪಡೆಯಲು ತೊಂದರೆ ಇರಲಿಲ್ಲ. 1 ನೇ ಆರೋಪಿಯಿಂದ 2 ನೇ ಆರೋಪಿ ಕುರಿತು ಸ್ವ ಖುಷಿ ಹೇಳಿಕೆಯನ್ನು ಪಡೆದಿರುವುದಿಲ್ಲ. ಪ್ರಕರಣ ನಡೆದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿದ್ದು ಇಲ್ಲ ಎಂದರೆ ಸರಿಯಲ್ಲ. ಮಾಸಿಕ ಮೀಟಿಂಗನ್ನು ನಮ್ಮ ಇಲಾಖೆಯಲ್ಲಿ ಕರೆಯುತ್ತಾರೆ ಎಂದರೆ ಸರಿ. ಹೆಚ್ಚಿನ ಪ್ರಕರಣವನ್ನು ದಾಖಲಿಸುವಂತೆ ನಮಗೆ ಮೀಟಿಂಗ್ ನಲ್ಲಿ ಹೇಳುತ್ತಾರೆ ಎಂದರೆ ಸರಿ. ಅಂಕಿ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ ಇದೆ/-
ಪ್ರ ದ ನ್ಯಾದಂ ಹೊನ್ನಾವರ.